# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ, ಮಹದೇವಪುರ ವಲಯ,

## ಕೆ.ಆರ್.ಪುರ ವಿಭಾಗ, ಬೆಂಗಳೂರು.

---

**ದಿನಾಂಕ:21-11-2020ರಂದು ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ಕೆ.ಆರ್.ಪುರ ಬಿಬಿಎಂಪಿ ಕಛೇರಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಪುರ ವಿಭಾಗ, ಕಛೇರಿಯಲ್ಲಿ ನಡೆದ ಸಭೆಯ ನಡವಳಿಗಳು:-**

**ಸಭೆಗೆ ಹಾಜರಿದ್ದ ಅಧಿಕಾರಿಗಳು:**

1. ಶ್ರೀ.ಎಮ್.ಲಿಯಾಖತ್- ನೋಡಲ್ ಅಧಿಕಾರಿಗಳು ವಾರ್ಡ್-55, ದೇವಸಂದ್ರ
2. ಶ್ರೀ.ವಿನಯ್ - ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು, ವಾರ್ಡ್-55 (Covid+Ve)
3. ಶ್ರೀ.ಅಯುಭ್ ಖಾನ್ - ಕಿರಿಯ ಅಭಿಯಂತರರು (ಇ-7)(ಬೆ.ವಿ.ಕಾಂ)
4. ಶ್ರೀ.ಅಜಯ್ ಕುಮಾರ್.ಕೆ.ಪಿ. ಸಹಾಯಕ ಅಭಿಯಂತರರು,ದೇವಸಂದ್ರ, ಬೆಸ್ಕಾಂ
5. ಶ್ರೀ.ಮಹಾಲಕ್ಷ್ಮೀ, ಕಿರಿಯ ಆರೋಗ್ಯ ನಿರೀಕ್ಷಕರು, ದೇವಸಂದ್ರ
6. ಶ್ರೀ.ಸಿದ್ದರಾಮಯ್ಯ. RI-55
7. ಶ್ರೀ.ಮುಕುಂದಪ್ಪ, ವಾರ್ಡ್ ಸಂ.55, ದೇವಸಂದ್ರ ಹಿರಿಯ ಆರೋಗ್ಯ ನಿರೀಕ್ಷಕರು
8. ಶ್ರೀ.ವೆಂಕಟರಮಣ, ವಾರ್ಡ್ ಸಂ.55, ದೇವಸಂದ್ರ
9. ಶ್ರೀ.ನಾಗರಾಜು, ಸ್ಥಳೀಯ ನಿವಾಸಿ, ವಾರ್ಡ್ ಸಂ.55 ಐ.ಟಿ.ಐ
10. ಶ್ರೀ.ಜಗದೀಶ್, ಸ್ಥಳೀಯ ನಿವಾಸಿ, ವಾರ್ಡ್ ಸಂ.55 ಐ.ಟಿ.ಐ

*****

ವಾರ್ಡ್ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು, ವಾರ್ಡ್ ಸಂ:55 ಸಭೆಗೆ ಎಲ್ಲಾರನ್ನು ಅಹ್ವಾನಿಸುತ್ತಾ, ಸಭೆಯ ವಿವರಗಳನ್ನು ನೀಡುವಂತೆ ಸೂಚಿಸಿದರು. ವಾರ್ಡ್ ಸಂ:55ಕ್ಕೆ ಸಂಬಂಧಿಸಿದಂತೆ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳು ಸಾರ್ವಜನಿಕರಿಂದ ಬಂದಂತಹ ಮನವಿಗಳು ವಾರ್ಡ್ ವ್ಯಾಪ್ತಿಯಲ್ಲಿ ಕೈಗೊಳ್ಳಬೇಕಾಗಿರುವ ಕೆಲಸಕಾರ್ಯಗಳು ಹಾಗೂ ಘನತ್ಯಾಜ್ಯ ನಿರ್ವಹಣೆ, ಬೆಂಗಳೂರು ಜಲ ಮಂಡಳಿ ಇಲಾಖೆ, ಕಾಮಗಾರಿ ಇಲಾಖೆ ಮತ್ತು ಬೆ.ವಿ.ಕಾಂ ಇಲಾಖೆ ಇತರೆ ವಿಷಯಗಳ ಬಗ್ಗೆ ಈ ಕೆಳಕಂಡಂತೆ ಚರ್ಚಿಸಲಾಯಿತು.

1. ವಾರ್ಡ್ ಕಸ ಸಂಗ್ರಹಣೆ ಬ್ಲಾಕ್/ಆಟೋಗಳ ಬಗ್ಗೆ ಮಾಹಿತಿಯನ್ನು ಸಭೆಯಲ್ಲಿ ತಿಳಿಸಲಾಯಿತು.
2. ಕೋವಿಡ್ ಟೆಸ್ಟಿಂಗ್ ಬಗ್ಗೆ ಸಭೆಯ ಎಲ್ಲಾರಿಗೂ ಮನವರಿಕೆ ಮಾಡಲಾಯಿತು. ಇನ್ನು ಹೆಚ್ಚು ಎಚ್ಚರಿಕೆ ವಹಿಸುವ ಬಗ್ಗೆ ತಿಳಿಸಿದರು. ಶಾಲಾ ಕಾಲೇಜ್‌ಗಳಲ್ಲಿ ಹೆಚ್ಚಿನ ಮುತುವರ್ಜಿಯಿಂದ ಟೆಸ್ಟಿಂಗ್ ಮಾಡುತ್ತಿರುವುದರ ಬಗ್ಗೆ ಗಮನ ಸೆಳೆದರು.
3. ಡೆಂಗ್ಯೂ, ಚಿಕನ್‌ಗುನ್ಯ ಮುಂತಾದ ಪ್ರಕರಣಗಳು ವರದಿಯಾಗುತ್ತಿರುವ ಹಿನ್ನಲೆಯಲ್ಲಿ ಹೆಚ್ಚಿನ ಒತ್ತುಕೊಡುವ ಬಗ್ಗೆ ಸೂಚಿಸಲಾಯಿತು.
4. ಬೆಸ್ಕಾಂ ವಿದ್ಯುತ್ ಕಂಬದಲ್ಲಿ OFC ಕೇಬಲ್ ತೊಂದರೆ ಬಗ್ಗೆ ಬೆಸ್ಕಾಂ ಅಧಿಕಾರಿಗಳಿಗೆ ಸೂಕ್ತ ಕ್ರಮ ವಹಿಸುವ ಬಗ್ಗೆ ಸೂಚಿಸಲಾಯಿತು.
5. ಕಂದಾಯ ಬಾಕಿ ವಸೂಲು ಮಾಡುವ ಬಗ್ಗೆ ಹೆಚ್ಚಿನ ಬಾಕಿ ಉಳಿಸಿಕೊಂಡಿರುವ ಆಸ್ತಿಗಳಿಂದ ವಸೂಲು ಮಾಡುವ ಬಗ್ಗೆ ಕಂದಾಯ ವಿಭಾಗದಿಂದ ಕ್ರಮ ವಹಿಸಲು ಸೂಚಿಸಲಾಯಿತು.

6. <u>**ಬೀದಿ ದೀಪ :**</u> ಹೈ ಮಾಸ್ಟ್ ಬೀದಿ ದೀಪ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲವೆಂದು ತಿಳಿಸಿದರು.

***ಕ್ರಮ:*** ವಿದ್ಯುತ್ ವಿಭಾಗ ಮತ್ತು ಸಂಬಂಧಪಟ್ಟವರು ಕ್ರಮ ವಹಿಸಲು ಸೂಚಿಸಿದೆ.

7. ದೇವಸಂದ್ರ ಮುಖ್ಯರಸ್ತೆ ಮತ್ತು ರಾಷ್ಟ್ರೀಯ ಹೆದ್ದಾರಿಯ ಅಕ್ಕಪಕ್ಕದಲ್ಲಿ ಕೋಳಿ ಮತ್ತಿತರ ಮಾಂಸ ತ್ಯಾಜ್ಯಗಳನ್ನು ಸುರಿಯುತ್ತಿರುವ ಬಗ್ಗೆ ಸೂಕ್ತ ಕ್ರಮ ವಹಿಸಲು ಸೂಚಿಸಲಾಯಿತು ಹಾಗೂ ರಸ್ತೆಗಳಲ್ಲಿ ಸ್ವಚತೆ ನೀಡದಿರುವ, ಬ್ಲಾಕ್ ಸ್ಪಾಟ್‌ಗಳನ್ನು ತೆಗೆಯದಿರುವ ಬಗ್ಗೆ. ಅತ್ಯಂತ ಜರೂರಾಗಿ ಕ್ರಮ ವಹಿಸುವ ಬಗ್ಗೆ ಸೂಚಿಸಲಾಯಿತು.

***ಕ್ರಮ:*** ಕಿರಿಯ ಆರೋಗ್ಯ ನಿರೀಕ್ಷಕರು, ಹಿರಿಯ ಆರೋಗ್ಯ ನಿರೀಕ್ಷಕರು ಮತ್ತು ಸ.ಕಾ.ಅ (SWM) ರವರಿಗೆ ಕ್ರಮ ವಹಿಸಲು ಸೂಚಿಸಿದೆ.

ವಂದನೆಗಳೊಂದಿಗೆ ಈ ಎಲ್ಲಾ ವಿಷಯಗಳ ಬಗ್ಗೆ ಚರ್ಚಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

21/4/2020 ADTP

ವಾರ್ಡ್ ಕಾರ್ಯದರ್ಶಿಗಳು ಹಾಗೂ
ಸಹಾಯಕ ಅಭಿಯಂತರರು, ವಾರ್ಡ್ ಸಂ–55

**ಪ್ರತಿಯನ್ನು:**

1. ಮಾನ್ಯ ಜಂಟಿ ಆಯುಕ್ತರು, ಮಹದೇವಪುರ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು, ಮಹದೇವಪುರ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
3. ಸಹಾಯಕ ಕಾರ್ಯಪಾಲಕ ಅಭಿಯಂತರರು(ಬೆ.ವಿ.ಕಾಂ), ಇ–7 ಉಪವಿಭಾಗ ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ
4. ಸಹಾಯಕ ಕಾರ್ಯಪಾಲಕ ಅಭಿಯಂತರರು(ಬೆ.ವಿ.ಕಾಂ), ಇ–12 ಉಪವಿಭಾಗ ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲ ಮಂಡಳಿ, ಕೆ.ಆರ್.ಪುರ ಉಪ ವಿಭಾಗ ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ
6. ಸಹಾಯಕ ಅಭಿಯಂತರರು, ಇ–3, ಬೆಂಗಳೂರು ಜಲ ಮಂಡಳಿ ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ
7. ಸಹಾಯಕ ಕಾರ್ಯಪಾಲಕ ಅಭಿಯಂತರರು(ಘನತ್ಯಾಜ್ಯ ನಿರ್ವಹಣೆ) ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ
8. ಸಹಾಯಕ ಕಾರ್ಯಪಾಲಕ ಅಭಿಯಂತರರು(ವಿದ್ಯುತ್) ರವರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ
9. ಕಛೇರಿ ಪ್ರತಿ